ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 25-29
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕುಮಾರವ್ಯಾಸ ಭಾರತ ಕಾವ್ಯದ ಗ್ರಂಥಸಂಪಾದನೆಯ ಅವಲೋಕನ

**ಡಾ. ಶಂಭುಲಿನಂಗನಗೌಡ ಬೆಳಕೇರಿ**
ಅತಿಥಿ ಉಪನ್ಯಾಸಕರು, ಭಾಷಾ ವಿಜ್ಞಾನ, ಡಾ. ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

***Abstract:***
*ಕುಮಾರವ್ಯಾಸ ವಿರಚಿತ 'ಕರ್ಣಾಟ ಭಾರತ ಕಥಾಮಂಜರಿ' ಕನ್ನಡ ಸಾಹಿತ್ಯದ ಮಹತ್ವದ ಮಹಾಕಾವ್ಯಗಳಲ್ಲಿ ಒಂದಾಗಿದ್ದು, ಮಹಾಭಾರತದ ಕಥೆಯನ್ನು ಕನ್ನಡದ ನೆಲ–ನುಡಿ, ಸಂಸ್ಕೃತಿ ಮತ್ತು ಜನಜೀವನದೊಂದಿಗೆ ಸಮನ್ವಯಗೊಳಿಸಿದ ಕೃತಿಯಾಗಿದೆ. ಈ ಕಾವ್ಯದ ಗ್ರಂಥಸಂಪಾದನೆಯ ಅವಲೋಕನವು ಅದರ ವಿವಿಧ ಹಸ್ತಪ್ರತಿಗಳು, ಮುದ್ರಿತ ಆವೃತ್ತಿಗಳು, ಪಾಠಭೇದಗಳು ಹಾಗೂ ಸಂಪಾದನಾ ವಿಧಾನಗಳನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿದೆ. ಕಾಲಾನುಕ್ರಮದಲ್ಲಿ ಪ್ರಕಟಗೊಂಡ ವಿವಿಧ ಆವೃತ್ತಿಗಳಲ್ಲಿ ಕಂಡುಬರುವ ಪಾಠಾಂತರಗಳನ್ನು ಗುರುತಿಸಿ, ಅವುಗಳ ವಿಶ್ವಾಸಾರ್ಹತೆಯನ್ನು ಪರಿಶೀಲಿಸುವುದು ಗ್ರಂಥಸಂಪಾದನೆಯ ಪ್ರಮುಖ ಅಂಶವಾಗಿದೆ. ಸಂಪಾದಕರು ಬಳಸಿರುವ ಹಸ್ತಪ್ರತಿಗಳು, ಪೂರ್ವಪ್ರಕಟಿತ ಆವೃತ್ತಿಗಳು, ಟೀಕೆಗಳು ಮತ್ತು ಭಾಷಿಕ ಆಧಾರಗಳು ಕಾವ್ಯದ ಮೂಲಪಾಠವನ್ನು ನಿರ್ಧರಿಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ. ಕುಮಾರವ್ಯಾಸನ ಭಾಷಾಶೈಲಿ, ಛಂದಸ್ಸು, ರೂಪಕ ವೈಶಿಷ್ಟ್ಯ ಮತ್ತು ಜನಪದೀಯ ಅಭಿವ್ಯಕ್ತಿಗಳನ್ನು ಸಂರಕ್ಷಿಸುವುದು ಸಂಪಾದನೆಯ ಸಂದರ್ಭದಲ್ಲಿ ವಿಶೇಷ ಗಮನಾರ್ಹವಾಗಿದೆ. ಹೀಗಾಗಿ, ಕುಮಾರವ್ಯಾಸ ಭಾರತದ ಗ್ರಂಥಸಂಪಾದನೆಯ ಅಧ್ಯಯನವು ಕೇವಲ ಪಠ್ಯಶುದ್ಧೀಕರಣಕ್ಕೆ ಸೀಮಿತವಾಗದೆ, ಕನ್ನಡದ ಶಾಸ್ತ್ರೀಯ ಸಾಹಿತ್ಯ ಪರಂಪರೆಯ ಸಂರಕ್ಷಣೆ ಮತ್ತು ಪುನರ್‌ವ್ಯಾಖ್ಯಾನಕ್ಕೂ ಮಹತ್ವದ ಕೊಡುಗೆ ನೀಡುತ್ತದೆ.*

***Keywords:*** *ಕುಮಾರವ್ಯಾಸ ಭಾರತ, ಗ್ರಂಥಸಂಪಾದನೆ, ಪಾಠಭೇದ, ಹಸ್ತಪ್ರತಿಗಳು, ಕನ್ನಡ ಸಾಹಿತ್ಯ.*

## ಪೀಠಿಕೆ

ಪ್ರಾಚೀನ ಕನ್ನಡ ಸಾಹಿತ್ಯವು ಸಾವಿರಾರು ವರ್ಷಗಳ ಇತಿಹಾಸವನ್ನು ಹೊಂದಿದೆ. ಇಂತಹ ಇತಿಹಾಸವನ್ನು ಹೊಂದಿದ ಸಾಹಿತ್ಯವು ತನ್ನ ಒಡಲಲ್ಲಿ ಅನೇಕ ಮಹಾಕಾವ್ಯಗಳನ್ನು, ಗದ್ಯಕೃತಿಗಳನ್ನು ಒಳಗೊಂಡಿದೆ. ಈ ಸಂದರ್ಭದಲ್ಲಿ ಇ.ಪಿ.ರೈಸ್ ರವರು ಸಾಹಿತ್ಯ ಚರಿತ್ರೆಯನ್ನು 'ಒಂದು ನದಿಯ ಪ್ರವಾಹಕ್ಕೆ ಹೋಲಿಸಿದ್ದಾರೆ'. ಪ್ರಾಚೀನ ಕನ್ನಡ ಸಾಹಿತ್ಯದ ರೂಪಗಳಾದ ಚಂಪೂ, ಷಟ್ಪದಿ, ರಗಳೆ, ಕಂದ, ತ್ರಿಪದಿ ಮೊದಲಾದವುಗಳಲ್ಲಿ ಪ್ರಾಚೀನ ಕವಿಗಳು ತಮ್ಮ ಕೃತಿಗಳನ್ನು ಹಸ್ತಪ್ರತಿ, ತಾಳೆಗರಿ, ಬೂರ್ಜ ಪತ್ರಗಳಲ್ಲಿ ರಚಿಸಿ, ಕನ್ನಡ ಸಾಹಿತ್ಯಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಇಂತಹ ಕೃತಿಗಳನ್ನು ಓದುಗರಿಗೆ ತಲುಪಿಸುವ ಕಾರ್ಯವು ಮಹತ್ವ ಪೂರ್ಣವಾದದು. ಇಂತಹ ಕಾರ್ಯವನ್ನು ಗ್ರಂಥ ಸಂಪಾದಕರು ಶ್ರಮವಹಿಸಿ ಪ್ರಾಚೀನ ಕೃತಿಗಳನ್ನು ಹೊರ ತಂದಿದ್ದಾರೆ.

***Please cite this article as:*** ಶಂಭುಲಿನಂಗನಗೌಡ ಬೆಳಕೇರಿ. (2026). ಕುಮಾರವ್ಯಾಸ ಭಾರತ ಕಾವ್ಯದ ಗ್ರಂಥಸಂಪಾದನೆಯ ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 5(3), 25–29

ಕನ್ನಡ ಗ್ರಂಥಸಂಪಾದನೆಯ ಕಾರ್ಯ ಪಾಶ್ಚಾತ್ಯ ವಿದ್ವಾಂಸರಿಂದ ಪ್ರಾರಂಭಗೊಂಡು, ಆರ್.ಸಿ.ಹಿರೇಮಠ, ಎಂ.ಚಿದಾನಂದಮೂರ್ತಿ, ಎಂ.ಎಂ.ಕಲಬುರ್ಗಿ, ಎಲ್.ಬಸವರಾಜ, ದೇ.ಜ.ಗೌ ಮುಂತಾದ ಸಂಶೋಧಕರಿಂದ ಗ್ರಂಥ ಸಂಪಾದನ ಕಾರ್ಯ ಯಶಸ್ವಿಯಾಗಿ ಮುಂದಿನ ತಲೆಮಾರಿನ ಸಂಶೋಧಕರಿಗೆ ನೆರವಾಗಿದೆ. ಅನುಪಲಬ್ದವಾಗಿರುವ ಸಾಹಿತ್ಯ ರಾಶಿಯನ್ನು ಹೊರತರಲು ಗ್ರಂಥ ಸಂಪಾದನೆಯ ಕಾರ್ಯ ಅವಶ್ಯಕವಾಗಿದೆ. ಈ ಕಾರ್ಯವು ಶ್ರಮದಾಯಕವಾದುದು, ಈ ಕಾರ್ಯವನ್ನು ಕೈಗೊಳ್ಳಬೇಕಾದರೆ ಹಲವಾರು ಭಾಷೆಗಳ, ಶಾಸ್ತ್ರಗಳ ಪರಿಚಯವೂ ಅಗತ್ಯವಾಗುತ್ತದೆ. ಈ ಎಲ್ಲಾ ಅರ್ಹತೆಗಳನ್ನು ಒಳಗೊಂಡ ಗ್ರಂಥ ಸಂಪಾದಕರು ಕುಮಾರವ್ಯಾಸಭಾರತ ಕಾವ್ಯವನ್ನು ಸಂಗ್ರಹಿಸಿ, ಸಂಪಾದಿಸಿ, ಪರಿಷ್ಕರಿಸಿ, ಪ್ರಕಟಿಸಿದ ಬಗೆಯನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಮಹಾಕವಿ ಹರಿಹರ ತನ ್ನಕಾವ್ಯದ ಮಾಧ್ಯಮವಾಗಿ ರಗಳೆ ಛಂದಸ್ಸನ್ನು ಬಳಸಿಕೊಂಡು ರಗಳೆ ಸಾಹಿತ್ಯಕ್ಕೆ ವಿಶಿಷ್ಟಸ್ಥಾನಮಾನ ಕಲ್ಪಿಸಿ 'ರಗಳೆಕವಿ' ಎಂದು ಪ್ರಸಿದ್ಧಿಯಾದನು. ತದ ನಂತರ ಅವನ ಸೋದರಳಿಯನಾದ ರಾಘವಾಂಕ ತನ್ನ ಕಾವ್ಯಗಳ ಅಭಿವ್ಯಕ್ತಿಗಾಗಿ ಷಟ್ಪದಿ ಛಂದೋರೂಪವನ್ನು ಅಳವಡಿಸಿಕೊಂಡು ಕಾವ್ಯಗಳನ್ನು ರಚಿಸಿ 'ಷಟ್ಪದಿಬ್ರಹ್ಮ' ಎಂದು ಖ್ಯಾತಿನಾಮನಾದನು. ರಾಘವಾಂಕನ ನಂತರ ಬಂದ ಕುಮಾರವ್ಯಾಸನು ಸಂಸ್ಕೃತದಲ್ಲಿ ವ್ಯಾಸರು ಬರೆದ ಹದಿನೆಂಟು ಪರ್ವದ ವ್ಯಾಸಭಾರತವನ್ನು ಆಧಾರವಾಗಿಟ್ಟು ಕೊಂಡು ಹತ್ತುಪರ್ವದಲ್ಲಿ "ಕರ್ಣಾಟ ಭಾರತ ಕಥಾಮಂಜರಿ"ಯನ್ನು 'ಭಾಮಿನೀಷಟ್ಪದಿಯಲ್ಲಿ' ಬರೆದಿದ್ದಾನೆ. ಕುಮಾರವ್ಯಾಸನನ್ನು ಕುರಿತು ಕುವೆಂಪುರವರು 'ಕುಮಾರವ್ಯಾಸನು ಹಾಡಿದರೆ ಕಲಿಯುಗ ದ್ವಾಪರ ಯುಗವಾಗುವದು' ಎಂದು ಹಾಡಿ ಹೊಗಳಿದ್ದಾರೆ. ಕುಮಾರವ್ಯಾಸ 'ಕಲಿಯುಗದ ಕಾಮಧೇನು' ಎಂದು ವಿಮರ್ಶಕರು ಕರೆದಿದ್ದಾರೆ. ಕುಮಾರವ್ಯಾಸ ಭಗವಾನ ಶ್ರೀಕೃಷ್ಣನನ್ನು ಕಾವ್ಯದ ನಾಯಕನಾಗಿ ಮಾಡಿಕೊಂಡು ಭಕ್ತಿ, ಭಾವ, ಕರುಣೆಯಿಂದ ನೆನೆದು ರೂಪಕಗಳನ್ನು ಹೆಚ್ಚು ಬಳಸಿ 'ರೂಪಕ ಸಾಮ್ರಾಜ್ಯದ ಚಕ್ರವರ್ತಿ'ಯಾಗಿ 10 ಪರ್ವಗಳಲ್ಲಿ ಕುಮಾರವಾಸ್ಯ ಭಾರತವನ್ನು ಬರೆದನು. ಅವುಗಳೆಂದರೆ, ಆದಿಪರ್ವ, ಸಭಾಪರ್ವ, ಅರಣ್ಯಪರ್ವ, ವಿರಾಟಪರ್ವ, ಉದ್ಯೋಗ ಪರ್ವ, ಭೀಷ್ಮಪರ್ವ, ದ್ರೋಣಪರ್ವ, ಕರ್ಣಪರ್ವ, ಶಲ್ಯಪರ್ವ, ಗದಾಪರ್ವ ಈ ಮೇಲಿನ ಎಲ್ಲಾ ಪರ್ವಗಳ ಗ್ರಂಥ ಸಂಪಾದನೆ, ಪರಿಸ್ಕರಣೆ, ಪ್ರಕಟಣೆ, ಮರು ಪ್ರಕಟಣೆ ಮಾಡಿದ ಇತಿಹಾಸವು ಈ ಕೆಳಗಿನಂತೆ ಲೇಖನದಲ್ಲಿ ಸಾದರ ಪಡಿಸಲಾಗಿದೆ.

ಸುಮಾರು 1430ರಲ್ಲಿ ಕುಮಾರವ್ಯಾಸನಿಂದ ರಚಿತವಾದ ಈ ಕಾವ್ಯವು ಷಟ್ಪದಿ ಕಾವ್ಯಗಳಲ್ಲಿ ಅಗ್ರಸ್ಥಾನವನ್ನು ಪಡೆದು 19ನೇ ಶತಮಾನದಲ್ಲಿ ಹಲವಾರು ಗ್ರಂಥ ಸಂಪಾದಕರಿಂದ ಸಂಪಾದನೆಗೊಂಡು ಪ್ರಕಟವಾಗಿರುವುದು ಗ್ರಂಥಸಂಪಾದನೆ ಇತಿಹಾಸದಲ್ಲಿ ಚಿರಸ್ಮರಣೆಯಾಗಿದೆ. ಆದಿಪರ್ವದಿಂದ ಗದಾಯುದ್ಧದವರೆಗೆ ಹತ್ತು ಪರ್ವಗಳನ್ನುಳ್ಳ ಈ ಕಾವ್ಯವನ್ನು 'ಕನ್ನಡ ಭಾರತ' ಎಂಬ ಹೆಸರಿನಲ್ಲಿ 1851ರಲ್ಲಿ 'ಮಂಗಳೂರಿನ ಜರ್ಮನ್ ಮಿಶನ್ ಪ್ರೆಸ್ಸಿನಲ್ಲಿ' ಅಚ್ಚಾಗಿ ಹೊರ ಬಂದಿತು. ನಂತರ ತೆಲುಗು ಲಿಪಿಯಲ್ಲಿ 1865 ಬೆಂಗಳೂರಿನ ವಿಚಾರ ದರ್ಪಣ ಮುದ್ರಾಕ್ಷರ ಶಾಲೆಯ ಮೂಲಕ 'ಕನ್ನಡ ಭಾರತ ದಶಪರ್ವ' ಎಂಬುದಾಗಿ ಅಚ್ಚಾಗಿ ಪ್ರಕಟಿತವಾಯಿತು. ಇದೇ ಅಚ್ಚಾದ ಕುಮಾರವ್ಯಾಸನ ಮೊದಲ ಪೂರ್ಣಗ್ರಂಥ ಇರಬೇಕೆಂದು ತೋರುತ್ತದೆ.

20ನೇ ಶತಮಾನದಲ್ಲಿ 1909ರಲ್ಲಿ ನಂಜನಗೂಡಿನ ಶ್ರೀಕಂಠಶಾಸ್ತ್ರಿಗಳು 'ಕನ್ನಡ ಮಹಾಭಾರತ ದಶಪರ್ವ' ಎಂಬ ಕುಮಾರವ್ಯಾಸನ ಗ್ರಂಥವನ್ನು ಸಂಪಾದಿಸಿದರು. ಇವರ ಸಂಪಾದನ ಗ್ರಂಥವನ್ನು ಮೈಸೂರಿನ ವಾಣಿವಿಲಾಸ ಬುಕ್ ಡಿಪೋದಿಂದ ಪ್ರಕಟವಾಯಿತು. 1916ರಲ್ಲಿ ಬೆಂಗಳೂರಿನ

ವಾಜಪೇಯ ಗೋವಿಂದಯ್ಯನವರು ಇದೇ ಹೆಸರಿನಲ್ಲಿ ಪ್ರಕಟ ಮಾಡಿದರು. ಮುಂದೆ ಹೊಸಗನ್ನಡದ ಕವಿಗಳಾದ ಕುವೆಂಪು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರು ಪೂರ್ಣ ಗ್ರಂಥವಾಗಿ 1958ರಲ್ಲಿ ಸಂಪಾದಿಸಿದರು. ಇವರು ಸಂಪಾದಿಸಿದ ಕೃತಿಯನ್ನು ಕನ್ನಡ ಸಂಸ್ಕೃತ ಇಲಾಖೆಯವರು ಪ್ರಕಟ ಮಾಡಿದರು.

ತ.ಸು.ಶಾಮರಾಯರು 'ಕುಮಾರವ್ಯಾಸ ಭಾರತ ಸಂಗ್ರಹ' ಎಂಬ ಶೀರ್ಷಿಕೆಯಡಿಯಲ್ಲಿ 1972 ರಲ್ಲಿ ಸಂಪಾದಿಸಿದರು. ಇವರು ಇಡೀ ಕಾವ್ಯವನ್ನು ಸುಮಾರು 2000 ಪದ್ಯಗಳಿಗೆ ಸೀಮಿತಗೊಳಿಸಿದ್ದಾರೆ. ತಾವು ಸಂಪಾದಿಸಿದ ಕೃತಿಯ ಮುನ್ನುಡಿಯಲ್ಲಿ ಕುಮಾರವ್ಯಾಸ ಪರಿಚಯ ಹಾಗು ಕಾವ್ಯದ ಬಗ್ಗೆ ಪರಿಚಯಿಸಿದ್ದಾರೆ. ಇವರ ನಂತರ ಎಂ.ವಿ.ಸೀತಾರಾಮಯ್ಯರವರು ಇಡಿ ಕಾವ್ಯವನ್ನು 1700 ಪದ್ಯಗಳಿಗೆ ಸೀಮಿತಗೊಳಿಸಿ, 1990ರಲ್ಲಿ ಬಿ.ಎಂ.ಪ್ರತಿಷ್ಠಾನದಿಂದ ಪ್ರಕಟವಾಗಿದೆ. ಇವರು ಅಚ್ಚಿನ ಪ್ರತಿಗಳೂ ಸೇರಿ 9 ಹಸ್ತಪ್ರತಿಗಳನ್ನು ಬಳಸಿದ್ದರೆ, ಈ ಕಾವ್ಯದಲ್ಲಿ ಬರುವ ಪರ್ವಗಳನ್ನು ಬೇರೆ ಬೇರೆಯಾಗಿ ಸಂಪಾದಿಸಿದ ಕೀರ್ತಿ ಮೈಸೂರಿನಲ್ಲಿ ಇರುವ ಓರಿಯಂಟಲ್ ಲೈಬ್ರರಿಗೆ ಸಲ್ಲುತ್ತದೆ. ವಿ.ಶ್ಯಾಮಾಚಾರ್ಯ ಅವರು 'ಆದಿಪರ್ವದೊಳ್‌ಸಭಾಪರ್ವ'ಎಂಬುದನ್ನು ಎರಡು ಸಂಪುಟದಲ್ಲಿ ಸಂಪಾದಿಸಿದ್ದಾರೆ. ಹೀಗೆ 1912–13ರಲ್ಲಿ ಪ್ರಕಟವಾಗಿದ್ದ ಆದಿಪರ್ವದ ಎಲ್ಲಾ ಭಾಗಗಳನ್ನು ಪರಿಷ್ಕರಿಸಿದವರು ಕೆ.ಆರ್.ಶೇಷಗಿರಿರವರು.

'ಆದಿಪರ್ವಸಂಗ್ರಹ'ವನ್ನು ತ.ಸು.ಶಾಮರಾವ್ ಮತ್ತು ಇತರರು ಸಂಪಾದಿಸಿದ್ದ ಕೃತಿಯನ್ನು ತ.ವೆಂ.ಸ್ಮಾರಕ ಗ್ರಂಥಮಾಲೆಯ 4ನೆಯ ಪುಸ್ತಕವಾಗಿ 1947ರಲ್ಲಿ ಪ್ರಕಟಮಾಡಿದೆ. ಕುಮಾರವ್ಯಾಸ ಭಾರತದ ಎರಡನೆಯ ಪರ್ವ 'ಸಭಾಪರ್ವ' ಈ ಪರ್ವವನ್ನು ಮೊದಲಿಗೆ ಸಂಪಾದಿಸಿದ್ದು ವಿ.ಶ್ಯಾಮಾಚಾರ್ಯರು, ಇದು ಪ್ರಕಟವಾಗಿದ್ದು 1915ರಲ್ಲಿ ಓರಿಯಂಟಲ್ ಗ್ರಂಥಾಲಯದಿಂದ. ಇದರ ಪಠ್ಯಭಾಗದಲ್ಲಿ 17 ಸಂಧಿಗಳೂ, 1300 ಪದ್ಯಗಳೂ ಇವೆ. ಇದನ್ನು ಮತ್ತೆ 10 ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಿಸಿದವರು ಎಸ್.ಬಸಪ್ಪ ಅವರು. ಈ ಸಭಾಪರ್ವವನ್ನು ಸಂಗ್ರಹ ರೂಪದಲ್ಲಿ ಸಂಪಾದಿಸಿರುವವರು ತ.ಸು.ಶಾಮರಾಯ ಅವರು. ತ.ವೆಂ.ಸ್ಮಾರಕ ಗ್ರಂಥಮಾಲೆಯ 8ನೆಯ ಕೃತಿಯಾಗಿ 1948ರಲ್ಲಿ ಹೊರ ಬಂದಿರುವ ಈ ಸಂಗ್ರಹ 1972ರಲ್ಲಿ ಮೂರನೆಯ ಮುದ್ರಣವಾಗಿದೆ.

ಮೂರನೆಯ ಪರ್ವವಾದ 'ಅರಣ್ಯಪರ್ವ'ವನ್ನು ವಿ.ಶ್ಯಾಮಾಚಾರ್ಯರು ಪರಿಷ್ಕರಿಸಿದ್ದು ಓರಿಯಂಟಲ್ ಲೈಬ್ರರಿಯಿಂದ 1918ರಲ್ಲಿ ಪ್ರಕಟವಾಗಿದೆ. ಮುಂದೆ ಇದೇ ಗ್ರಂಥವನ್ನು ಸಿ.ಪಿ.ಕೃಷ್ಣಕುಮಾರ ಅವರು ಸಂಪಾದಿಸಿದ್ದು 1976ರಲ್ಲಿ. ಇದು ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಾಶಿತವಾಗಿದೆ. ನಾಲ್ಕನೆ ಪರ್ವವಾದ 'ವಿರಾಟಪರ್ವ' ಮತ್ತು ಐದನೇ ಪರ್ವವಾದ 'ಉದ್ಯೋಗಪರ್ವ'ಗಳನ್ನು ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿಗಳು ಸಂಸ್ಕರಿಸಿದ್ದು, ಇದನ್ನು 1877ರಲ್ಲಿ ಮದರಾಸ ಸರಸ್ವತೀ ವಿಲಾಸ ಮುದ್ರಾಕ್ಷರ ಶಾಲಾ ದಿಂದ ಪ್ರಕಟವಾಗಿದೆ. ಇವುಗಳಲ್ಲಿ ವಿರಾಟಪರ್ವವನ್ನು ಮೊದಲ ಬಾರಿಗೆ ಬೇರೆಯಾಗಿ "ಕನ್ನಡ ಭಾರತ ವಿರಾಟ ಪರ್ವ" ಎಂಬುದಾಗಿ ವಿ.ಅಪ್ಪಸ್ವಾಮಿ ಮೊದಲಿಯಾರ್ ಅವರು 1887ರಲ್ಲಿ ಹೊರತಂದಿದ್ದಾರೆ. ಇವರ ನಂತರ ಇದೇ ಪರ್ವವನ್ನು ಮೊತ್ತೊಮ್ಮೆ ಪರಿಸ್ಕರಿಸಿದವರು ಎಸ್. ಎನ್. ಕೃಷ್ಣಜೋಯಿಸ್‌ರವರು, ಮುಂದೆ ವಿರಾಟಪರ್ವ ಸಂಗ್ರಹವನ್ನು ಸಾಮಾನ್ಯ ಓದುಗರಿಗೆ ಅನುಕೂಲವಾಗುವಂತೆ ತ.ಸು.ಶಾಮರಾವ್ ಮತ್ತು ಎಚ್.ಎಂ.ಶಂಕರನಾರಯಣರಾವ್ ರವರು ಸಿದ್ದಪಡಿಸಿದರು.

ಕುಮಾರವ್ಯಾಸಭಾರತದ ಆರನೇ ಪರ್ವವಾದ 'ಉದ್ಯೋಗಪರ್ವ'ವನ್ನು ದೊರೆತ ಐದು ಹಸ್ತಪ್ರತಿಗಳ ಸಹಾಯದಿಂದ ಡಿ.ಶ್ರೀನಿವಾಸಾಚಾರ್ಯ ಮತ್ತು ಡಿ.ಎಲ್.ನರಸಿಂಹಚಾರ್‌ರವರು ಶೋಧಿಸಿ ಅಚ್ಚು ಹಾಕಿಸಿದರು. ನಂತರ ಟಿ.ಎಸ್.ವೆಂಕಣ್ಣಯ್ಯ ಮತ್ತು ಇತರರ ಸಮಿತಿಯು ಸಿದ್ದಪಡಿಸಿದ ಗ್ರಂಥ

ಸಂಪಾದನೆಯ ಕಾರ್ಯವನ್ನು ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗವು 1930ರಲ್ಲಿ ಪ್ರಕಟಮಾಡಿದೆ. ನಂತರ ತ.ಸು.ಶಾಮರಾಯರು 1987ರಲ್ಲಿ ಸಂಪಾದಿಸಿದರು.

ಏಳನೇ ಪರ್ವವಾದ 'ದ್ರೋಣಪರ್ವ'ವನ್ನು ಎ.ಎಸ್.ಬಸಲಿಂಗಯ್ಯ ಮತ್ತು ಎನ್. ಅನಂತರಂಗಚಾರ್ ಒಂಬತ್ತು ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಿಸಿದರು. ಇವರು ಪರಿಷ್ಕರಿಸಿದ ಪರ್ವವು ಓರಿಯಂಟಲ್ ಲೈಬ್ರರಿಯಿಂದ 1936ರಲ್ಲಿ ಹೊರ ಬಂದಿತು. 1951ರಲ್ಲಿ ಅಚ್ಚಾಗಿದ್ದು 1968ರಲ್ಲಿ ಮರು ಮುದ್ರಣ ಪಡೆಯಿತು. ಇದರಲ್ಲಿ ಒಟ್ಟು ಪದ್ಯಗಳು 1300 ಮತ್ತು 19 ಸಂಧಿಗಳು. ಇವರ ನಂತರ ದ್ರೋಣ ಪರ್ವ ಸಂಗ್ರಹವನ್ನು ಎಚ್.ನರಸಣ್ಣ ಮತ್ತು ಬಿ.ಎಸ್. ಸಣ್ಣಯ್ಯರವರು ಸಂಪಾದಿಸಿದ ಪರ್ವವು 1964ರಲ್ಲಿ ಸಾಧನ ಸಾಹಿತ್ಯ ಮಂದಿರದಿಂದ 1964ರಲ್ಲಿ ಹೊರ ಬಂದಿದೆ.

'ಶಲ್ಯಪರ್ವ'ವು ಚಿಕ್ಕದಾದುದರಿಂದ ಇದರೊಡನೆ ಗದಾಪರ್ವವನ್ನು ಸೇರಿಸಿ, "ಶಲ್ಯ ಗದಾಪರ್ವಗಳು" ಎಂಬುದಾಗಿ ಸಂಪಾದನ ಸಮಿತಿಯಲ್ಲಿ ಒಬ್ಬರಾದ ಎನ್.ಅನಂತರಂಗಚಾರ್ಯ ಸಂಪಾದಿಸಿದರು. ಶಲ್ಯಾಪರ್ವದಲ್ಲಿ 3 ಸಂಧಿಗಳು, 175 ಪದ್ಯಗಳಿವೆ. ಗದಾಪರ್ವದಲ್ಲಿ 13 ಸಂಧಿಗಳು, 650 ಪದ್ಯಗಳಿವೆ. ಎಚ್.ಎಂ.ಶಂಕರನಾರಾಯಣರು ಗದಾಪರ್ವವನ್ನು 'ಭೀಮದುರ್ಯೋಧನೀಯ' ಎಂಬ ಹೆಸರಿನಲ್ಲಿ ಸಿದ್ಧಪಡಿಸಿ, 1961ರಲ್ಲಿ ಪ್ರಕಟವಾಯಿತು. ನಂತರ ಇದೇ ಕೃತಿಯು 1966ರಲ್ಲಿ ಮರು ಮುದ್ರಣವಾಯಿತು.

ಕುಮಾರವ್ಯಾಸ ಭಾರತದ ಉಳಿದ ಪರ್ವವಾದ 'ಕರ್ಣಪರ್ವ'ವನ್ನು ಎನ್. ಅನಂತರಂಗಚಾರ್ಯರು ಸಂಪಾದಿಸಿದರು. ಇದು 1940ರಲ್ಲಿ ಓರಿಯಂಟಲ್ ಲೈಬ್ರರಿಯಿಂದ ಪ್ರಕಟವಾಗಿದೆ. ಇದು 27 ಸಂಧಿಗಳು ಮತ್ತು ಸುಮಾರು 1250 ಪದ್ಯಗಳನ್ನು ಒಳಗೊಂಡಿದೆ. ಈ ಆವೃತಿಗೆ 10 ಹಸ್ತಪ್ರತಿಗಳು ಉಪಯೋಗವಾಗಿವೆ. ಈ ರೀತಿಯಾಗಿ ಕರ್ನಾಟ ಭಾರತ ಕಥಾಮಂಜರಿಯನ್ನು ಮಂಗಳೂರಿನ ಜರ್ಮನ್ ಮಿಶನ್ ಪ್ರೆಸ್ಸಿನಲ್ಲಿ ಮೊದಲ ಬಾರಿಗೆ ಮುದ್ರಣಗೊಂಡು ಎನ್.ಅನಂತರಂಗಾಚಾರ್‌ರವರ ಕಾಲದ ತನಕ ಸಂಪಾದನೆಗೊಂಡು ಕನ್ನಡ ಗ್ರಂಥ ಸಂಪಾದನೆಯ ಇತಿಹಾಸದಲ್ಲಿ ಮಹತ್ವ ಪಡೆದುಕೊಂಡಿದೆ.

ಗ್ರಂಥ ಸಂಪಾದಕರ ಕಾರ್ಯವು ತುಂಬಾ ಮಹತ್ವ ಪೂರ್ಣವಾದುದು. ಏಕೆಂದರೆ ನಮ್ಮ ಪ್ರಾಚೀನ ಕವಿಗಳೂ ರಾಜರ ಆಶ್ರಯದಲ್ಲಿ ಇದ್ದು, ಸಾಹಿತ್ಯ ಕೃತಿಗಳನ್ನು ಬರೆದರು. ಸುಮಾರು 950ರ ಕಾಲಘಟ್ಟದಲ್ಲಿ ಮುದ್ರಣದ ವ್ಯವಸ್ಥೆ ಇರಲಿಲ್ಲ, ಅಂತಹ ಸಮಯದಲ್ಲಿ ತಾಳೆಗರಿ, ಹಸ್ತಪ್ರತಿ ಇವುಗಳಲ್ಲಿ ತಮ್ಮ ಕಾವ್ಯಗಳನ್ನು ಬರೆಯುತಿದ್ದರು. ಅಂತಹ ಹಸ್ತಪ್ರತಿಗಳಲ್ಲಿ ಇರುವ ಸಾಹಿತ್ಯವನ್ನು ಗ್ರಂಥ ಸಂಪಾದನೆ ಮಾಡಿ ಓದುಗರಿಗೆ ಪುಸ್ತಕ ರೂಪದಲ್ಲಿ ದೊರೆಯುವಂತೆ ಮಾಡಿದರು. ಇವರ ಈ ಕಾರ್ಯದಿಂದ ಪ್ರಾಚೀನ ಕೃತಿಗಳನ್ನು ಅಧ್ಯಯನ ಮಾಡುವುದಕ್ಕೆ ಅನುಕೂಲವಾಗಿದೆ. ಒಂದು ವೇಳೆ ಈ ಕಾರ್ಯವನ್ನು ಸಂಶೋಧಕರು, ಗ್ರಂಥ ಸಂಪಾದಕರು ಮಾಡದೇ ಇರದಿದ್ದರೆ ಹಸ್ತಪ್ರತಿಯಲ್ಲಿ ಇರುವ ಸಾಹಿತ್ಯ ದೇವಸ್ಥಾನ, ಮಠಗಳಲ್ಲಿ ಪೂಜೆ ಮಾಡಿಸಿ ಕೊಳ್ಳುತ್ತಾ ದೇವರ ಗರ್ಭಗುಡಿಯಲ್ಲಿ ಮೂಕ ಸಾಕ್ಷಿಯಾಗಿ ಇರುತ್ತಿದ್ದವು. ಒಟ್ಟಿನಲ್ಲಿ ಕುಮಾರವ್ಯಾಸನು ಬರೆದಿರುವ ಕುಮಾರವ್ಯಾಸ ಭಾರತಕಾವ್ಯವನ್ನು ಇಂದು ನಾವೆಲ್ಲರು ಓದುತ್ತಿದ್ದೇವೆ ಎಂದರೆ ಅದು ಗ್ರಂಥ ಸಂಪಾದಕರ ಪರಿಶ್ರಮದಿಂದ ಎಂದು ಹೇಳಬೇಕಾಗುತ್ತದೆ .

**ಪರಾಮರ್ಶನ ಗ್ರಂಥಗಳು**


- ಕಲಬುರ್ಗಿ, ಎಂ.ಎಂ. (2012). *ಕನ್ನಡ ಹಸ್ತಪ್ರತಿಶಾಸ್ತ್ರ*. ಸಪ್ನ ಬುಕ್ ಹೌಸ್.
- ಕಲಬುರ್ಗಿ, ಎಂ.ಎಂ. (2012). *ಕನ್ನಡ ಗ್ರಂಥ ಸಂಪಾದನಶಾಸ್ತ್ರ*. ಸಪ್ನ ಬುಕ್ ಹೌಸ್.

- ಮುಗಳಿ, ರಂ.ಶ್ರೀ. (2016). *ಕನ್ನಡ ಸಾಹಿತ್ಯ ಚರಿತ್ರೆ,* ಗೀತಾ ಬುಕ್ ಹೌಸ್.
- ರಾಮೇಗೌಡ. (2015). *ಪ್ರಾಚೀನ ಕಾವ್ಯ ಚಿಂತನೆ.* ಕನ್ನಡ ಪುಸ್ತಕ ಪ್ರಾಧಿಕಾರ.
- ಸಣ್ಣಯ್ಯ, ಬಿ.ಎಸ್. (2002). *ಪ್ರಾಚೀನ ಕನ್ನಡ ಗ್ರಂಥ ಸಂಪಾದನೆ.* ಕನ್ನಡ ಪುಸ್ತಕ ಪ್ರಾಧಿಕಾರ.
- ಶಾಮರಾಯ, ತ.ಸು. (2016). *ಕನ್ನಡ ಸಾಹಿತ್ಯ ಚರಿತ್ರೆ.* ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ.
- ಶೇಷಗಿರಿ, ಕೆ.ಆರ್. (1978). *ಕುಮಾರವ್ಯಾಸ ವಿರಚಿತ ಆದಿಪರ್ವ.* ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ.